ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
*ಸತ್ತು ಹೋದವರ ಸ್ಮರಣೆಗಾಗಿ ಹಾಕುವ ಜಾಹೀರಾತು ಯಾರಿಗಾಗಿ?*



'ಹೌದಾ? ಹೋಗ್ಬಿಟ್ರಾ? ನಿಜ್ವಾಗ್ಲೂ? ಯಾವಾಗ?' ಅನ್ನುವರಿಗೆ ಪ್ರೂಫ್‌ಗಾಗಿ.

ಸೃಜನ ಜೈನ್, ಹೂವಿನಹಡಗಲಿ
*ನಿಮ್ಮ ಮೊದಲ ನಮಸ್ಕಾರ ಯಾರಿಗೆ?*
ಜ್ಞಾಪಕವಿಲ್ಲ. ಚಿಕ್ಕವಳಾಗಿದ್ದಾಗ ಅಪ್ಪ ಯಾರೋ ಹಿರಿಯರಿಗೆ ಜೋತಾ ಮಾಡು ಅಂತ ಮಾಡಿಸಿದ್ದರು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕೈ ಕೈ ಸೇರಿದರೆ ಚಪ್ಪಾಳೆ. ಹೆಣ್ಣು ಹೆಣ್ಣು ಸೇರಿದರೆ?*
ಮಧ್ಯದಲ್ಲಿ ಸಿಕ್ಕ ಗಂಡು ಚಪ್ಪಾಚೂರು.

ಬಿ. ಚಂದ್ರೇಗೌಡ, ಬೆಂಗಳೂರು
*ದೇವರ ಅಸಲಿ ಜಾತಿ ಮತ್ತು ಭಾಷೆ ಯಾವುದು?*
male ಜಾತಿ; ಪ್ರೀತಿ.

ಆರ್. ಮಧುಸೂದನ್, ಹಾಸನ
*ಪ್ರೀತಿಗೆ ಸವಾಲು ಹಾಕಬಹುದಾದ ಮತ್ತೊಂದು ಮಧುರ ಸಂಬಂಧ ಈ ಜಗತ್ತಿನಲ್ಲಿ ಯಾವುದೂ ಇಲ್ಲವೆ?*




ಇದೆಯಲ್ಲ; ಮತ್ತೊಬ್ಬಳ ಪ್ರೀತಿ!

ಸಿಹಿಮೊಗೆ ರಮೇಶ್, ಮೈಸೂರು
*ಮನಸ್ಸಿಗೆ ಶಾಂತಿ, ನೆಮ್ಮದಿ ಇಲ್ಲದಿದ್ದರೂ 60ನೆಯ ವರ್ಷದ ಶಾಂತಿ ಮಾಡಿಕೊಳ್ಳುವರಿಗೆ ನಿಮ್ಮ ಸಂದೇಶ?*
ಇನ್ನಾದರೂ ಪೇಪರ್, ನ್ಯೂಸ್ ಚಾನಲ್, ಸೀರಿಯಲ್‌ಗಳಿಂದ ದೂರವಿರಿ. ನೆಮ್ಮದಿ ತಾನಾಗಿಯೇ ಸಿಗುತ್ತದೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಸೀತೆ ವನವಾಸ ಮಾಡಿದರೂ ಪತಿಯೊಡನಿದ್ದಳು. ವಿನಾಕಾರಣ ವಿರಹಿಯಾದ ಊರ್ಮಿಳೆ ಮಾಡಿದ ತಪ್ಪೇನು?*
ಲಕ್ಷ್ಮಣನ ಸ್ಟೇಟಸ್ ಗೊತ್ತಿಲ್ಲದೆ ಮದುವೆಯಾಗಿದ್ದು. ಬಾಸ್ ಜೊತೆ ಟೂರ್ ಹೋಗೋ ಎಲ್ಲ ಪಿ.ಎ.ಗಳ ಹೆಂಡ್ತಿಯರ ಗೋಳೂ ಒಂದೇ.

ಮೇಟಿ ಕೊಟ್ರಪ್ಪ, ಬಸರಕೋಡು
*ನಿಮ್ಮ ಹೆಸರನ್ನು ಉತ್ತರಕುಮಾರ ಎಂದು ಬದಲಿಸಬಹುದಿತ್ತಲ್ಲವೆ?*
ಉತ್ತರಗಳು ನನ್ನ ಕುಮಾರರಾದ್ದರಿಂದ ಉತ್ತರಗರ್ಭ ಎನ್ನಬಹುದಿತ್ತು.

ಶಿರಾಲಿ ದೀಪಕ್ ಶೇಟ್, ಬೆಂಗಳೂರು
*ರೈಲಿನಲ್ಲಿ ಟಿಕೆಟ್ ವೇಯ್ಟಿಂಗ್‌ನಲ್ಲಿದ್ದು ಕನ್‌ಫರ್ಮ್ ಆದಾಗ ಖುಷಿಯಾಗುವಂತೆ ಸಾವಿನ ಪ್ರಯಾಣಕ್ಕೂ ವೇಯ್ಟಿಂಗ್ ಇದ್ದಿದ್ದರೆ?*
ಇದೆಯಲ್ಲ! ನರ್ಸಿಂಗ್‌ಹೋಂನ ಕಡೆಯ ಬಿಲ್ ಕಟ್ಟಿದ ತಕ್ಷಣ ವೇಯ್ಟಿಂಗ್ ಇದ್ದದ್ದು ಕನ್‌ಫರ್ಮ್ಡ್!

ಹೇಕಮಂ ಮಧ್ಯಸ್ಥ, ಫಲ್ಗುಣಿ
*ದೈವಾಂಶ ಸಂಭೂತರೆನಿಸಿರುವ ಅನೇಕರು ದೆವ್ವಾಂಶ ಸಂಭೂತರಾಗಿರುತ್ತಾರಲ್ಲಾ...?*
ಸರಿಯೇ. ಮೊದಲನೆಯದು ಅಡ್ವರ್ಟೈಸ್‌ಮೆಂಟ್; ಎರಡನೆಯದು ರಿಯಾಲಿಟಿ.

ಮಂಜುನಾಥ್, ಗುಂಜೂರು
*ಹಿಂದಿನ ಮಹರ್ಷಿಗಳಿಗೂ ಈಗಿನ ಮಹರ್ಷಿಗಳಿಗೂ ಏನು ವ್ಯತ್ಯಾಸ ಗುರೂಜೀ?*
ಅಂದಿನವರ ಯೋಚನೆ ಮಹತ್ತು ಮತ್ತು ಆರ್ಷೇಯದ್ದು. ಇಂದಿನವರದು Ma, her, she ಗಳದು!

ಕುಮಾರ ಚಲವಾದಿ, ಹೊಳೆನರಸಿಪುರ
*ಹಿಂದಿನ ಕಾಲದಲ್ಲಿ ಮಠಾಧೀಶರಿಂದ ಸಮಸ್ಯೆಗಳು ಬಗೆಹರಿಯುತ್ತಿದ್ದವು. ಈಗ?*
ಬಗೆ ಬಗೆಯಾಗಿ ಹರಿಯುತ್ತವೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ವಿಮರ್ಶಕರನ್ನು ವಿಮರ್ಶಿಸುವವರು ಯಾರು?*
ಕನ್ನಡದವರಂತೂ ಅಲ್ಲ. ಅವರು ಅದನ್ನೂ ಓದಿರುವುದಿಲ್ಲ, ಇದನ್ನೂ ಓದಿರುವುದಿಲ್ಲ.

## ಬಹುಮಾನಿತ ಪ್ರಶ್ನೆ

ಟಿ. ಸೋಮಣ್ಣ ಹೊಸಪೇಟೆ
*ಚಪ್ಪಲಿಗಳನ್ನು ಎ.ಸಿ. ಷೋರೂಮಲ್ಲಿ ಮಾರುತ್ತಾರೆ. ಆಹಾರ, ತರಕಾರಿಗಳನ್ನು ಫುಟ್‌ಪಾತ್‌ನಲ್ಲಿ ಮಾರುತ್ತಾರೆ. ಏಕೆ?*
ಪುಂಡ, ಪೋಕ್ರಿ, ಪುಢಾರಿಗಳ ಹಿತದೃಷ್ಟಿಯಿಂದ. ಫುಟ್ಪಾತಲ್ಲೇ ಚಪ್ಪಲಿ ಸಿಕ್ಕಿಬಿಟ್ರೆ ಕೊಳೆತ ಮೊಟ್ಟೆ, ಟೊಮ್ಯಾಟೋ ಬದಲು ಅವನ್ನೇ...

ಎಸ್. ಪ್ರಭಾ, ಬೆಂಗಳೂರು
*ಹುಲುಮಾನವರು ಎಂದರೇನು?*
ಹುರಿಯಾಳುಗಳಿಂದ ಉಪ್ಪವಾಗುವವರು.

ಬಿ.ಎಂ.ಜಿ. ನಾಥ್, ಸೂಲಿಬೆಲೆ
*ಪೌರಾಣಿಕ ನಾಟಕಗಳಲ್ಲಿ ಅಭಿಮನ್ಯುವಿಗೆ ಹೆಚ್ಚು ಗಾನಾ ಬಜಾನಾ ಇರುತ್ತಲ್ಲಾ, ಯಾಕೆ ಗುರುಗಳೆ?*
ಕಾಲ ಯಾವುದಾದರೇನು, ಟೀನೇಜರ್ ಬಂದಾಗ ಜೊತೆಜೊತೆಗೆ ರಾಕ್, ಪಾಪ್ ಮ್ಯೂಸಿಕ್ ಇರಲೇಬೇಕೆಂಬುದು ನಿಯಮ.

ಎಂ.ಎನ್. ಸೋಮಶೇಖರ್, ಮೈಸೂರು
*ವ್ಯಕ್ತಿಗಳು ಸತ್ತುಹೋದನಂತರವೂ ಅವರುಗಳ ಜನ್ಮದಿನಾಚರಣೆ ಆಚರಿಸುತ್ತಾರಲ್ಲಾ...?*



ಕೆಲವರ ಗುಣವೇ ಹಾಗೆ. ಸತ್ರೂ ಜನ್ನ ಜಾಲಾಡೋದನ್ನ ಬಿಡಲ್ಲ.

ಹೇಮಾವತಿ ಜೈನ್, ಹೂವಿನಹಡಗಲಿ
*ಕಳ್ಳ ಮತ್ತು ಲಾಭ ದೊರೆತಾಗ ಏನು ಮಾಡುತ್ತೀರಿ ಸಾರ್?*
ಕಳ್ಳ ದೊರೆತಾಗ ಲಾಭ ಮಾಡಿಕೊಳ್ಳುತ್ತೇನೆ, ಲಾಭ ಬಂದಾಗ ಕಳ್ಳತನದಿಂದ ಮುಚ್ಚಿಡುತ್ತೇನೆ!

ರಮೇಶ. ಜ. ಬೊಂಗಾಳೆ, ಬೈಲಹೊಂಗಲ
*ಪ್ರೇಮ ಕುರುಡು ಎನ್ನುತ್ತಾರೆ. ಅಯ್ಯೋ ರಾಮಾ! ನಿಜವೇ ಸಾರ್?*
ನಿಜ. ಅದಕ್ಕೇ ಒಬ್ಬರನ್ನೊಬ್ಬರು ಆಧರಿಸಿಕೊಂಡು ನಡೆಯುವುದು.

■ ರಾಮ್